# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1155 (1378)

ಸದಸ್ಯರ ಹೆಸರು ಡಾ: ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿವರು)

ಉತ್ತರಿಸಬೇಕಾದ ದಿನಾಂಕ 16.03.2026

ಉತ್ತರಿಸುವವರು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ/ಮೂಡಿಗೆರೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಮೂರು ಕಾಡಾನೆಗಳು ಹೊಲ-ಗದ್ದೆ, ತೋಟದಲ್ಲಿ ದಾಂದಲೆ ನಡೆಸುತ್ತಿದ್ದು, ಬೆಳೆಗಳನ್ನು ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿ ಅಡಿಕೆ, ಕಾಫಿ, ಮೆಣಸು, ಬಾಳೆ ಸಂಪೂರ್ಣ ನೆಲಕಚ್ಚಿರುವ ಕುರಿತು ಗ್ರಾಮದ ಜನ ಸರ್ಕಾರಕ್ಕೆ ಆಗ್ರಹಿಸುತ್ತಿರುವುದು ಗಮನದಲ್ಲಿದೆಯೇ; ಹಾಗಿದ್ದಲ್ಲಿ, ಗ್ರಾಮಸ್ಥರ ಕೋರಿಕೆಯನ್ನು ಸರ್ಕಾರ ಯಾವ ರೀತಿ ಪರಿಹರಿಸಬಹುದಾಗಿದೆ;</td><td>
<ul>
<li>ಹೌದು. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ/ಮೂಡಿಗೆರೆ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕಾಡಾನೆಗಳ ಹಾವಳಿಯಿಂದ ರೈತರಿಗೆ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.</li>
<li>ಸದರಿ ಪ್ರಕರಣಗಳಲ್ಲಿ ಕಾಡಾನೆಗಳ ಹಾವಳಿಗೊಳಗಾದ ಪ್ರದೇಶದಲ್ಲಿ ರೈತರಿಗೆ ನಷ್ಟವಾಗುತ್ತಿರುವುದಕ್ಕೆ ಸರ್ಕಾರದ ಆದೇಶ ಸಂಖ್ಯೆ: ಅಪಜೀ:156 ಎಫ್ ಡಬ್ಲ್ಯೂಎಲ್ 2022 ಬೆಂಗಳೂರು ದಿನಾಂಕ:18-01-2023ರನ್ವಯ ಬೆಳೆ ಹಾನಿಗೆ ದಯಾತ್ಮಕ ಧನವನ್ನು ನೀಡಲಾಗುತ್ತಿದೆ.</li>
<li>ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಮತ್ತು ಚಿಕ್ಕಮಗಳೂರು ವಿಭಾಗಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿಗಳಿಂದ ಉಂಟಾದ ಬೆಳೆಹಾನಿಗೆ ಪಾವತಿಸಲಾದ ದಯಾತ್ಮಕ ಧನದ ವಿವರ ಈ ಕೆಳಗಿನಂತಿದೆ.</li>
</ul>
<table>
<tr><th>ವರ್ಷ</th><th>ಬೆಳೆಹಾನಿ ಪ್ರಕರಣಗಳ ಸಂಖ್ಯೆ</th><th>ನೀಡಲಾದ ದಯಾತ್ಮಕ ಧನ (ರೂ.)</th></tr>
<tr><td colspan="3">ಕೊಪ್ಪ ವಿಭಾಗ</td></tr>
<tr><td>2022-23</td><td>400</td><td>44,59,766</td></tr>
<tr><td>2023-24</td><td>292</td><td>48,51,700</td></tr>
<tr><td>2024-25</td><td>367</td><td>75,52,508</td></tr>
<tr><td>2025-26 (ಜನವರಿ ಅಂತ್ಯಕ್ಕೆ)</td><td>390</td><td>81,18,556</td></tr>
<tr><td>ಒಟ್ಟು</td><td>1449</td><td>2,49,82,530</td></tr>
<tr><td colspan="3">ಚಿಕ್ಕಮಗಳೂರು ವಿಭಾಗ</td></tr>
<tr><td>2022-23</td><td>1,798</td><td>1,49,48,946</td></tr>
<tr><td>2023-24</td><td>1,514</td><td>1,92,43,880</td></tr>
<tr><td>2024-25</td><td>1,922</td><td>3,42,46,333</td></tr>
<tr><td>2025-26 (ಜನವರಿ ಅಂತ್ಯಕ್ಕೆ)</td><td>1,083</td><td>2,38,83,182</td></tr>
<tr><td>ಒಟ್ಟು</td><td>6317</td><td>9,23,22,341</td></tr>
</table>
</td></tr>
</table>

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ</td><td>ಆನೆಗಳನ್ನು ಕಂಡಾಕ್ಷಣ ಅರಣ್ಯ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದರೂ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿರುವ ಕುರಿತು ಸ್ಥಳೀಯರು ಆರೋಪಿಸಿದ್ದು, ಇದಕ್ಕೆ ಶಾಶ್ವತವಾದ ಪರಿಹಾರ ವನ್ನು ಕಂಡುಕೊಳ್ಳಲು ಅರಣ್ಯ ಇಲಾಖೆ ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ. (ಪೂರ್ಣ ವಿವರ ಒದಗಿಸುವುದು)</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ ಆನೆ-ಮಾನವ ಸಂಘರ್ಷವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.<br><br>
• ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾನವ-ಆನೆ ಸಂಘರ್ಷವನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು 2022-23ನೇ ಸಾಲಿನಲ್ಲಿ ಆನೆ ಕಾರ್ಯಪಡೆ (Elephant Task Force) ತಂಡವನ್ನು ರಚಿಸಿರುತ್ತದೆ. ಅದರಂತೆ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಕಾರ್ಯ ನಿರ್ವಹಿಸಲು ಸದರಿ ಕಾರ್ಯಪಡೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿ-01, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ-01, ವಲಯ ಅರಣ್ಯಾಧಿಕಾರಿ-01, ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು-04, ಗಸ್ತು ಅರಣ್ಯ ಪಾಲಕರು-08 ಹಾಗೂ ಸ್ಥಳೀಯ 32 ಜನರನ್ನು ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿಸಿಕೊಂಡು ಒಟ್ಟು 47 ಇಲಾಖಾ ಅಧಿಕಾರಿ / ಸಿಬ್ಬಂದಿ / ಹೊರಗುತ್ತಿಗೆ ನೌಕರರ ಸೇವೆಗಳನ್ನು ಒದಗಿಸಿದ ಮೂಲಕ ಕಾಡಾನೆಗಳನ್ನು ಹಿಮ್ಮೆಟ್ಟಿಸಲು ಕಾರ್ಯರೂಪಕ್ಕೆ ತರಲಾಗಿದೆ.<br><br>
• ಕೊಪ್ಪ ವಿಭಾಗದ ಬಾಳೆಹೊನ್ನೂರು, ನರಸಿಂಹರಾಜಪುರ ಹಾಗೂ ಚಿಕ್ಕಗ್ರಹಾರ ವಲಯದಲ್ಲಿ ಮಾನವ-ಆನೆ ಸಂಘರ್ಷದ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಚಿಕ್ಕಮಗಳೂರು ವೃತ್ತದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರಣ್ಯ ಇಲಾಖೆ ಸಿಬ್ಬಂದಿಗಳು ಮತ್ತು ಪ್ರಸ್ತುತ ಲಭ್ಯವಿರುವ ಸಲಕರಣೆಗಳು ಹಾಗೂ ಸಂಪನ್ಮೂಲಗಳನ್ನು ಬಳಸಿಕೊಂಡು ಕೊಪ್ಪ ವಿಭಾಗದಲ್ಲಿ ಶೃಂಗೇರಿ-ಕೊಪ್ಪ ಆನೆ ಕಾರ್ಯಪಡೆಯನ್ನು ಕಾರ್ಯಗತಗೊಳಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ಅಪಜೀ 01 ಎಫ್ ಡಬ್ಲ್ಯೂ ಎಲ್ 2026 (ಭಾಗ-1) ದಿನಾಂಕ: 02-03-2026ರಲ್ಲಿ ನಿರ್ದೇಶಿಸಲಾಗಿದೆ.<br><br>
• ಸದರಿ ಆದೇಶದ ಮೇರೆಗೆ ಕೊಪ್ಪ ವಿಭಾಗದ ನರಸಿಂಹರಾಜಪುರ ಹಾಗೂ ಬಾಳೆಹೊನ್ನೂರು ಕೇಂದ್ರ ಸ್ಥಾನವಿರುವಂತೆ ಆನೆ ಕಾರ್ಯಪಡೆಯ 02 ತುಕಡಿಗಳು ಕಾರ್ಯ ನಿರ್ವಹಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.<br><br>
• ಕೊಪ್ಪ ವಿಭಾಗದ ಚಿಕ್ಕ ಅಗ್ರಹಾರ ವಲಯ ವ್ಯಾಪ್ತಿಯ ಈ ಕೆಳಕಂಡ ಪ್ರದೇಶಕ್ಕೆ ರೈಲ್ವೇ ಬ್ಯಾರಿಕೇಡ್ ನಿರ್ಮಾಣ ಮಾಡಲು ರೂ.1277.500 ಲಕ್ಷಗಳ ವಿಸ್ತೃತ ಯೋಜನಾ ವರದಿ (ಡಿಪಿಆರ್)ಗೆ ಸರ್ಕಾರವು ದಿನಾಂಕ:03-03-2026 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.<br><br>
<table>
<tr><th>ಕ್ರ. ಸಂ</th><th>ಪ್ರದೇಶದ ಹೆಸರು</th><th>ವಿಸ್ತೀರ್ಣ (ಕಿ.ಮೀಗಳಲ್ಲಿ)</th><th>ಮೊತ್ತ (ಲಕ್ಷಗಳಲ್ಲಿ)</th></tr>
<tr><td>1</td><td>ಸಾರ್ಯಾದಿಂದ ಕರ್ಕೂಟ</td><td>2.810</td><td>469.400</td></tr>
<tr><td>2</td><td>ಕೊಳ್ಳೇಹಳ್ಳ ದಿಂದ ಕರ್ಕೂಟ</td><td>2.570</td><td>431.700</td></tr>
</table></td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | (see below) |

| | | | |
|---|---|---|---|
| 3 | ಬೆಳ್ಳಂಗಿಯಿಂದ ಕೊಳ್ಳೇಹಳ್ಳ | 2.230 | 376.400 |
| **ಒಟ್ಟು** | | **7.610** | **1277.500** |

- ಕೊಪ್ಪ ವಿಭಾಗದಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ.
- ಸಾರ್ವಜನಿಕರ ಸಹಾಯಕ್ಕಾಗಿ ಮೂಡಿಗೆರೆ ಆನೆ ಕಾರ್ಯಪಡೆ ಸಹಾಯವಾಣಿ 7204004261 ನ್ನು ತೆರೆಯಲಾಗಿದ್ದು, ಇದರ ಮೂಲಕ ಸಾರ್ವಜನಿಕರ ಕರೆಗಳಿಗೆ ತ್ವರಿತವಾಗಿ ಸ್ಪಂದಿಸಲಾಗುತ್ತಿದೆ.
- ಸಾರ್ವಜನಿಕರಿಗೆ / ಗ್ರಾಮಸ್ಥರುಗಳಿಗೆ ಆನೆಗಳ ಚಲನ-ವಲನಗಳ ಬಗ್ಗೆ ಮಾಹಿತಿ ನೀಡುವ ಸಲುವಾಗಿ ಆಯ್ದ ವಿವಿಧ 10 ಸ್ಥಳಗಳಲ್ಲಿ Digital Display Board ಗಳನ್ನು ಅಳವಡಿಸಲಾಗಿದೆ.
- ಸಾರ್ವಜನಿಕರಿಗೆ / ಗ್ರಾಮಸ್ಥರಿಗೆ ಆನೆಗಳ ಚಲನ-ವಲನಗಳ ಬಗ್ಗೆ ಮಾಹಿತಿಯನ್ನು ಮೊಬೈಲ್ ಮುಖಾಂತರ ಸಂದೇಶಗಳನ್ನು ನೀಡುವುದರ ಜೊತೆಗೆ, ಆನೆಗಳು ಸಂಚರಿಸುವ ಸಮಯದಲ್ಲಿ ಗ್ರಾಮಸ್ಥರುಗಳಿಗೆ ಧ್ವನಿವರ್ಧಕದ ಮೂಲಕ ಎಚ್ಚರಿಕೆ ಸಂದೇಶವನ್ನು ನೀಡಲಾಗುತ್ತಿದೆ.
- ವನ್ಯಪ್ರಾಣಿಗಳು ಅರಣ್ಯದ ಅಂಚಿನ ಗ್ರಾಮಗಳಿಗೆ ಬಂದಂತಹ ಸಂದರ್ಭದಲ್ಲಿ ಸಾರ್ವಜನಿಕರಿಗೆ ತಿಳಿಸಲು ಹಾಗೂ ವನ್ಯಪ್ರಾಣಿಗಳನ್ನು ಬೆದರಿಸಲು ವಿಭಾಗ ವ್ಯಾಪ್ತಿಯ ವಲಯಗಳಿಗೆ Elephant tracking alert systemನ್ನು ಅಳವಡಿಸಲಾಗಿದೆ ಹಾಗೂ ಡ್ರೋಣ್‌ಗಳ ಮುಖಾಂತರ ಆನೆಗಳ ಚಲನ-ವಲನಗಳ ಬಗ್ಗೆ ನಿಗಾವಹಿಸಲಾಗುತ್ತಿದೆ.
- ಕಾಡಂಚಿನ ಗ್ರಾಮಗಳು, ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಮಾನವ-ವನ್ಯಜೀವಿ ಸಂಘರ್ಷ ನಿಯಂತ್ರಣ ಕುರಿತಂತೆ ಬೀದಿ ನಾಟಕದಂತಹ ಜಾಗೃತ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲು ಭಿತ್ತಿ ಪತ್ರಗಳನ್ನು ನೀಡಲಾಗುತ್ತಿದೆ.
- ಆನೆಗಳ ಚಲನವಲನ ನಿಗಾವಹಿಸುವ ಕುರಿತಂತೆ **ವಿಭಾಗೀಯ ಕಮಾಂಡ್ ನಿಯಂತ್ರಣ ಕೇಂದ್ರ [DCCC]** ಸ್ಥಾಪನೆ ಮಾಡಲಾಗಿದೆ.
- ಕ್ಷೇತ್ರ ಸಿಬ್ಬಂದಿಗಳಿಗೆ ಕಾಲಕಾಲಕ್ಕೆ ಮಾನವ- ವನ್ಯಜೀವಿ ಸಂಘರ್ಷ ಕುರಿತಂತೆ ತರಬೇತಿಯನ್ನು ನೀಡಲಾಗುತ್ತಿದೆ.
- ಕಾಡಾನೆಯ ಹಾವಳಿ ನಿಯಂತ್ರಿಸಲು ಆನೆ ನಿರೋಧಕ ಕಂದಕ ನಿರ್ಮಾಣ ಮಾಡಲಾಗಿದೆ ಹಾಗೂ ಸೋಲಾರ್ ಟೆಂಟಕಲ್ ತಂತಿ ಬೇಲಿಗಳನ್ನು ಅಳವಡಿಸಲಾಗಿದೆ. ಅಲ್ಲದೇ, ಪ್ರಸ್ತುತ ಸಾಲಿನಲ್ಲಿಯೂ ಆನೆ ನಿರೋಧಕ ಕಂದಕ ನಿರ್ಮಾಣ ಹಾಗೂ ಸೋಲಾರ್ ಟೆಂಟಕಲ್ ತಂತಿ ಬೇಲಿಗಳನ್ನು ಅಳವಡಿಸಲು ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು ಕಾಮಗಾರಿಯು ಪ್ರಗತಿಯಲ್ಲಿದೆ.

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | • ಇಲಾಖಾ ಸಿಬ್ಬಂದಿಗಳು, ಆನೆ ಹಿಮ್ಮೆಟ್ಟಿಸುವ ತಂಡಗಳು ಹಾಗೂ ಆನೆ ಕಾರ್ಯಪಡೆ ತಂಡಗಳು ನಿರಂತರವಾಗಿ ಗಸ್ತು ಸಂಚರಿಸಿ ಕಾಡಾನೆಯು ಗ್ರಾಮಗಳಿಗೆ ಪ್ರವೇಶಿಸದಂತೆ ಹಿಮ್ಮೆಟ್ಟಿಸುವ ಕಾರ್ಯವನ್ನು ಕೈಗೊಳ್ಳುತ್ತಾರೆ.<br>• ಅರಣ್ಯದ ಅಂಚಿನಲ್ಲಿ ಬರುವ ರೈತರ ಜಮೀನುಗಳ ಸುತ್ತ ಸೋಲಾರ್ ತಂತಿ ಬೇಲಿಗಳನ್ನು ನಿರ್ಮಿಸಲು ಸರ್ಕಾರದ ವತಿಯಿಂದ ರಿಯಾಯಿತಿಯನ್ನು ಶೇ. 50 ರಷ್ಟು ನೀಡಲಾಗುತ್ತಿದೆ.<br>• ಮಾನವ ಜೀವ ಹಾನಿಗೆ ಕಾರಣವಾದ ಪುಂಡಾನೆಗಳನ್ನು ಸೆರೆ ಹಿಡಿದು ಸ್ಥಳಾಂತರಿಸಲಾಗುತ್ತಿದೆ.<br>• ಆನೆಗಳ ಚಲನವಲನಗಳನ್ನು ಮೇಲ್ವಿಚಾರಣೆ ಮಾಡಲು 'ಆನೆ ಎಲ್ಲಿ' ಎಂಬ ತಂತ್ರಜ್ಞಾನ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. |

**ಇ-ಸಂಖ್ಯೆ: ಅಪಜೀ 76 ಎಫ್‌ಡಬ್ಲ್ಯೂಎಲ್ 2026**

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು